ದಿನಾಂಕ **11.11.2024.**

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ 2ನೇ ಪಕ್ಷಗಾರರ ಪರ ವಕೀಲರಿಂದಃಃ**

ನಾನು ಬಿ.ಎಸ್ಸಿ ಎಲ್ ಎಲ್ ಬಿ ಮಾಡಿದ್ದೇನೆ. ಬಿ.ಎಸ್ಸಿಯಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯ ಇತ್ತು. ನಾನು ಟೆಕ್ನಿಕಲ್ ವಿಷಯದಲ್ಲಿ ಯಾವುದೇ ವಿಶೇಷ ಕೋರ್ಸನ್ನು ಮಾಡಿಲ್ಲ. ವೈದ್ಯಕೀಯ ಪ್ರಯೋಗಾಲಯಕ್ಕೆ ಸಂಬಂಧಪಟ್ಟಂತೆ ನಾನು ವಿಶೇಷ ತರಬೇತು ಪಡೆದಿಲ್ಲ. ನಾನು ಹಾಸನ ವಿಶ್ವೇಶ್ವರಯ್ಯ ಬಡಾವಣೆಯ ವಾಸಿ. ನಾನು ಎಲ್.ಎಲ್.ಬಿ ಪದವಿಯನ್ನು ಹಾಸನದ ಎಂ.ಕೃಷ್ಣಾ ಲಾ ಕಾಲೇಜಿನಲ್ಲಿ 2014 ರಿಂದ 2017ರವರೆಗೆ ಮಾಡಿದ್ದೇನೆ. ನನ್ನ ಕಾಲೇಜಿನ ಅವಧಿ ಬೆಳಿಗ್ಗೆ 9.30 ರಿಂದ 5-30ರವರೆಗೆ ಇತ್ತು. ನಾನು ಕಾಲೇಜಿಗೆ ಅಡ್ಮಿಷನ್ ಮಾಡುವ ಸಂದರ್ಭದಲ್ಲಿ ನಾನು ವೃತ್ತಿ ಮಾಡುತ್ತಿದ್ದೇನೋ ಎಂದು ಘೋಷಣೆ ಮಾಡಬೇಕು ಎಂದರೆ ಅದರ ಅವಶ್ಯಕತೆ ಇಲ್ಲ. ನಾನು ಕಾಲೇಜಿಗೆ ರೆಗ್ಯುಲರ್ ಆಗಿ ಹಾಜರಾಗಿ ಪರೀಕ್ಷೆ ಬರೆದು ಪಾಸ್ ಮಾಡಿದ್ದೇನೋ ಎಂದರೆ ಅದೇ ರೀತಿ ಕಾಲೇಜಿಗೆ ಹಾಜರಾಗಿ ಪರೀಕ್ಷೆ ಬರೆದು ಪಾಸ್ ಮಾಡಿದ್ದೇನೆ. ಪಾಸ್ ಆದ ಬಗ್ಗೆ ಕಾಲೆಜಿನ ಪ್ರಾವಿಜನಲ್ ಸರ್ಟಿಫಿಕೇಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಕಾಲೇಜಿನ ಅಪ್ಲಿಕೇಶನ್ ಫಾರಂ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೋ ಎಂದರೆ ನನ್ನ ಬಳಿ ಇಲ್ಲ. ಕಾಲೇಜಿನಿಂದ ಸದರಿ ಅಪ್ಲಿಕೇಶನ್ ಫಾರಂ ತರಿಸಿಕೊಳ್ಳಲು ನನ್ನದೇನೂ ಅಭ್ಯಂತರವಿಲ್ಲ.

2. ಈ ಕೇಸನ್ನು ಹಾಕುವುದಕ್ಕಿಂತ ಪೂರ್ವದಲ್ಲಿ ಕಾರ್ಮಿಕ ಇಲಾಖೆಯಲ್ಲಿ ನಾನೊಂದು ಕೇಳು ಹಾಕಿದ್ದೆ ಎಂದರೆ ನಿಜ. ಸದರಿ ಕೇಸಿಗೆ ಸಂಬಂಧಪಟ್ಟಂತೆ ಯಾವುದೇ ವಿಚಾರವನ್ನು ನಾನು ಈ ಕೇಸಿನಲ್ಲಿ ಹೇಳಿಲ್ಲ ಎಂದರೆ ಈ ಅರ್ಜಿಯನ್ನು ಸಲ್ಲಿಸುವಾಗ ಆಗಿರುವ ವಿಳಂಬ ಮನ್ನಾಕ್ಕೆ ಹಾಕಿದ ಮಧ್ಯಂತರ ಅರ್ಜಿಯಲ್ಲಿ ಸದರಿ ವಿಷಯ ಹೇಳಿರುತ್ತೇನೆ. ಕಾರ್ಮಿಕ ಇಲಾಖೆಯಲ್ಲಿ ಹಾಕಿದ ಕೇಸಿನ ಸಂಪೂರ್ಣ ವಿವರ ಮತ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಈಗ ನನಗೆ ತೋರಿಸಿದ ದಾಖಲೆಯ ದೃಢೀಕೃತ ನಕಲು ಕಾರ್ಮಿಕ ಇಲಾಖೆಯಲ್ಲಿ ನಾನು ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿ.ಆರ್.1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯ ದೃಢೀಕೃತ ನಕಲು ಕಾರ್ಮಿಕ ಇಲಾಖೆಯಲ್ಲಿ ನಾನು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದ ಆರ್ಡರ್ ಶೀಟ್ ನ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿ.ಆರ್.2 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯ ದೃಢೀಕೃತ ನಕಲು

ಕಾರ್ಮಿಕ ಇಲಾಖೆಯ ಪ್ರಕರಣದಲ್ಲಿ ನಾನು ಸಲ್ಲಿಸಿದ ಲೀಗಲ್ ನೋಟೀಸಿನ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿ.ಆರ್.3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯ ದೃಢೀಕೃತ ನಕಲು ಕಾರ್ಮಿಕ ಇಲಾಖೆಯಲ್ಲಿ ನಾನು ಸಲ್ಲಿಸಿದ ಅರ್ಜಿಯಲ್ಲಿನ ತಿದ್ದುಪಡಿಯಾದ ಅರ್ಜಿಯ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿ.ಆರ್.4 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯ ದೃಢೀಕೃತ ನಕಲು ಕಾರ್ಮಿಕ ಇಲಾಖೆಯಲ್ಲಿ ನಾನು ಸಲ್ಲಿಸಿದ ಮುಖ್ಯವಿಚಾರಣಾ ಪ್ರಮಾಣಪತ್ರದ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿ.ಆರ್.5 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯ ದೃಢೀಕೃತ ನಕಲು ಸದರಿ ಪ್ರಕರಣದಲ್ಲಿ ಇಲಾಖೆಗೆ ನೀಡಿದ ಚೆಕ್ ನ ದೃಢೀಕೃತ ನಕಲು ಆಗಿದೆ. ಸದರಿ ದಾಖಲೆಯನ್ನು ನಿ.ಆರ್.6 ಎಂದು ಗುರುತಿಸಲಾಯಿತು.

3. ಈ ಅರ್ಜಿಯಲ್ಲಿ ನನಗೆ ಸಂಬಂಧಿಸಿದ ವೇತನದ ಸ್ಲಿಪ್ ಹಾಕಿಲ್ಲ ಸಾಕ್ಷಿ ಮುಂದುವರೆದು ಹೇಳುತಾತರೆ, ಅದಕ್ಕೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್ಮೆಂಟ್ ಹಾಕಿದ್ದೇನೆ. ಎದುರುದಾರ ಎನ್.ಸಿ.ಡಯಾಗ್ನಸ್ಟಿಕ್ ನಲ್ಲಿಯ ನೌಕರ ಎಂದು ತೋರಿಸಲು ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೇನೋ ಎಂದರೆ ಐಡಿ ಕಾರ್ಡ್ ಹಾಜರುಪಡಿಸಿದ್ದೇನೆ. ಐಡಿ ಕಾರ್ಡ್ ಹೊರತುಪಡಿಸಿ ಆಫರ್ ಲೆಟರ್, ಜಾಯಿನಿಂಗ್ ಲೆಟರ್, ಅಪಾಯಿಂಟ್ ಮೆಂಟ್ ಲೆಟರ್ ಅಥವಾ ಕರಾರು ಅಂಥದ್ದೇನಾದರೂ ಹಾಜರುಪಡಿಸಿದ್ದೇನೋ ಎಂದರೆ ಎಲ್ಲವೂ ಮೌಖಿಕವಾಗಿ ಆಗಿದ್ದರಿಂದ ಹಾಜರುಪಡಿಸಿಲ್ಲ. ಎಲ್ಲಾ ವಿಚಾರವೂ ಮೌಖಿಕವಾಗಿಯೇ ಆಗಿದೆ ಎಂದು ಈಗ ಹೇಳಿರುವುದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಹೇಳಿದ್ದೇನೋ ಎಂದರೆ ನೆನಪಿಲ್ಲ.

4. ಅರ್ಜಿಯ ಪ್ಯಾರಾ 5ರಲ್ಲಿ ನನಗೆ ನೀಡಬೇಕಾಗಿದೆ ಎಂದು ಇನ್ಸೆಂಟಿವ್ ಲೆಕ್ಕ ಮಾಡಿ ತೋರಿಸಿದ ಕುರಿತು ಏನಾದರೂ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೋ ಎಂದರೆ ರಿಜಿಸ್ಟರ್ ಅವರಲ್ಲಿಯೇ ಇದೆ, ಅವರ ಸಿಸ್ಟಂ ನಿಂದಲೇ ಅವರಿಗೆ ಮೇಲ್ ಮಾಡುತ್ತಿದ್ದುದರಿಂದ ನನ್ನ ವಶದಲ್ಲಿ ಯಾವುದೇ ದಾಖಲಾತಿ ಇಲ್ಲ. ಪ್ಯಾರಾ 5ರಲ್ಲಿ ಹೇಳಿರುವ ವಿಚಾರದ ಕುರಿತು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಸಾಕ್ಷಿ ಮುಂದುವರಿದು ಹೇಳುತ್ತಾರೆ, ಇನ್ಸೆಂಟಿವ್ ಕೊಡುತ್ತಿದ್ದರು ಎನ್ನುವ ಕುರಿತು ನ್ಯಾಯಾಲಯಕ್ಕೆ ದಾಖಲಾತಿ ಸಲ್ಲಿಸಿದ್ದೇನೆ. ncdiagnostichassan ಎನ್ನುವ ಮೇಲ್ ಐಡಿ ಯಿಂದ ravic37 ಎಂಬ ಮೇಲ್ ಐಡಿಗೆ ಕಳುಹಿಸುತ್ತಿದ್ದೆ. ಸದರಿ ಮೇಲಿ ಐಡಿಗಳ ಸರ್ವೀಸ್ ಪ್ರೊವೈಡರ್ ಯಾರು ಎನ್ನುವುದು ನೆನಪಿಲ್ಲ. ಈ

ರೀತಿ ಮೇಲೆ ಹೇಳಿದಂತೆ ಮೇಲ್ ಐಡಿಯಿಂದ ಇನ್ಸೆಂಟಿವ್ ಕೋರಿ ಮೇಲ್ ಮಾಡುತ್ತಿದ್ದೆ ಎನ್ನುವ ವಿಚಾರವನ್ನು ನನ್ನ ಅರ್ಜಿಯಲ್ಲಿ ಹೇಳಿಲ್ಲ. ಸದರಿ ಮೇಲ್ ಕಳುಹಿಸಿದ ಬಗ್ಗೆ ಪ್ರಿಂಟ್ ಅಥವಾ ಸ್ಕ್ರೀನ್ ಶಾಟ್ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ, ನನ್ನ ವಶದಲ್ಲಿ ಇದೆ. ಮುಂದಿನ ವಾಯ್ದೆಯಂದು ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ. ನನ್ನ ಅರ್ಜಿಯಲ್ಲಿ ನನ್ನ ಹುದ್ದೆಯನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ.

5. ನನ್ನ ಅರ್ಜಿಯ ಪ್ಯಾರಾ 5ರಲ್ಲಿ ಮುಂದುವರೆದು ಗಳಿಕೆ ರಜೆಯ ಹಣ ರೂ.1,02,500ಬರಬೇಕೆಂದು ಕೋರಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ, ಸಾಕ್ಷಿ ಮುಂದುವರೆದು ಹೇಳುತ್ತಾರೆ, ಹಾಜರಾತಿ ಪುಸ್ತಕ ಅವರ ವಶದಲ್ಲಿಯೇ ಇದೆ. ಹಾಜರಾತಿ ಪುಸ್ತಕ 2ನೇ ಪಕ್ಷಗಾರರ ವಶದಲ್ಲಿ ಇದೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿಲ್ಲ ಎಂದು ನಾನು ನನ್ನ ಅರ್ಜಿಯಲ್ಲಿ ಹೇಳಿಲ್ಲ.

6. ಪ್ಯಾರಾ 5ರಲ್ಲಿ ಮುಂದುವರೆದು ರೂ.34,985/- ಬೋನಸ್ ಬರಬೇಕೆಂದು ಕೋರಿದ್ದು, ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಸಲ್ಲಿಸಿಲ್ಲ.

7. ಕಾರ್ಮಿಕ ಇಲಾಖೆಗೆ ಅರ್ಜಿ ಸಲ್ಲಿಸುವಾಗ ನನ್ನ ಹುದ್ದೆಯನ್ನು ವ್ಯವಸ್ಥಾಪಕ ಎಂದು ತೋರಿಸಿದ್ದೇನೆ ಎನ್ನುವುದು ನಿಜ. ಕಾರ್ಮಿಕ ಇಲಾಖೆಯಲ್ಲಿ ತಿದ್ದುಪಡಿ ಅರ್ಜಿಯಲ್ಲಿ ನನ್ನ ಹುದ್ದೆಯನ್ನು ಮ್ಯಾನೇಜರ್ ಎಂದು ಹಾಕಿದ್ದೇನೆ ಎನ್ನುವುದು ನಿಜ. ಈಗ ನ್ಯಾಯಾಲಯದ ಮುಂದಿರುವ ಅರ್ಜಿಯಲ್ಲಿ ನನ್ನ ಹುದ್ದೆಯನ್ನು ಕಾರ್ಮಿಕ ಎಂದು ಬರೆದಿದ್ದೇನೆ ಎಂದರೆ ಮ್ಯಾನೇಜರ್ ಎಂದು ಬರೆದಿದ್ದೇನೆ.

8. ದಿನಾಂಕ 03.02.2022ರಂದು, 2ನೇ ಪಕ್ಷಗಾರರಿಗೆ ಕಳುಹಿಸಿದ ಲೀಗಲ್ ನೋಟೀಸಿನಲ್ಲಿ as per the agreement between you and my client, both of you are liable to pay monthly insentives for the year September 2020 to July 2021 ಎಂದು ಹೇಳಿದ್ದೇನೆ ಎನ್ನುವುದು ನಿಜ. ಆ ರೀತಿ ಯಾವುದೇ ಅಗ್ರಿಮೆಂಟನ್ನು ನ್ಯಾಯಾಲಯಕ್ಕೆ ನಾನು ಸಲ್ಲಿಸಿಲ್ಲ ಎಂದರೆ ಅಗ್ರಿಮೆಂಟ್ ಮೌಖಿಕವಾಗಿ

ಆಗಿರುವುದರಿಂದ ಸಲ್ಲಿಸಿಲ್ಲ. ನೋಟೀಸಿನಲ್ಲಿ ಅಗ್ರಿಮೆಂಟ್ ಎಂದು ಬರೆದು ನಂತರ ಮುಖ್ಯವಿಚಾರಣೆಯಲ್ಲಿ ಮೌಖಿಕ ಅಗ್ರಿಮೆಂಟ್ ಆಗಿದೆ ಎಂದು ಹೇಳಿ ನನ್ನ ನಿಲುವನ್ನು ಅಭಿವೃದ್ಧಿಪಡಿಸಿಕೊಂಡಿದ್ದೇನೆ ಎಂದರೆ ಮೌಖಿಕ ಅಗ್ರಿಮೆಂಟ್ ಆಗಿದ್ದರಿಂದ ಆ ರೀತಿ ಹೇಳಿದ್ದೇನೆ.

9. ನಾನು 2ವರೆ ವರ್ಷಗಳಿಂದ ವಕೀಲ ವೃತ್ತಿ ಮಾಡುತ್ತಿದ್ದೇನೆ. ನನ್ನ enrollment ಆಗಿದೆ, ಬಾರ್ ಕೌನ್ಸಿಲ್ ಪರೀಕ್ಷೆ ಪಾಸು ಮಾಡಿದ್ದೇನೆ.

(ಈ ಹಂತದಲ್ಲಿ ನ್ಯಾಯಾಲಯದ ಅವಧಿ 2-00 ಗಂಟೆಯಾದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಗಿದೆ)

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುದುವರೆದ ಪಾಟೀ ಸವಾಲುಃ 2ನೇ ಪಕ್ಷಗಾರರ ಪರ ವಕೀಲರಿಂದಃ**

10. ಕಾರ್ಮಿಕ ಇಲಾಖೆಯಲ್ಲಿ ಈ ಅರ್ಜಿಯಲ್ಲಿ ಕೇಳಿದಂತಹ ಇನ್ಸೆಂಟಿವ್ ಬೋನಸ್ ಮತ್ತು ಮಾನಿಟರಿ ಬೆನಿಫಿಟ್ಸ್ ಗಳನ್ನು ಕೇಳಿಲ್ಲ. ಔಷಧಿಕಾರರ ಪ್ರಯೋಗಾಲಯದಲ್ಲಿ ನನ್ನ ಕರ್ತವ್ಯದ ಅವಧಿಯು 24X7 ಇತ್ತು, ಅಗತ್ಯವಿದ್ದಾಗಲೆಲ್ಲ ಕೆಲಸಕ್ಕೆ ಹೋಗುತ್ತಿದ್ದೆ. ಆ ರೀತಿ ನಾನು ಅಲ್ಲಿ ಕರ್ತವ್ಯ ಮಾಡುತ್ತಿದ್ದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ನಾನು ಔಷಧ ಪ್ರಯೋಗಾಲಯದಲ್ಲಿ ಕರ್ತವ್ಯ ಮಾಡಿದ್ದರಿಂದ ರೂ.1,03,97,300/- ನಷ್ಟು ಲಾಭ ಮಾಡಿದ್ದೇನೆ ಎನ್ನುವ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಲೀಗಲ್ ನೋಟೀಸಿನಲ್ಲಿ ನಾನು ಹೇಳಿರುವ ಅಂಶ ಮತ್ತು ಈ ಅರ್ಜಿಯಲ್ಲಿ ಹೇಳಿರುವ ಅಂಶಗಳಲ್ಲಿ ತುಂಬಾ ವ್ಯತ್ಯಾಸಗಳಿವೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ನನಗೆ ಬೇಕಾದಂತೆ ಅಂಶಗಳನ್ನು ಅಭಿವೃದ್ಧಿಪಡಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನನಗೆ ಯಾವ ವಿಧದ ರಜೆಗಳು ಇದ್ದವು ಎಂಬುದನ್ನು ನಮೂದು ಮಾಡಿಲ್ಲ ಎನ್ನುವುದು ನಿಜ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಐಡಿ ಕಾರ್ಡ್ ನಿಪಿ-16ರಲ್ಲಿ ಎನ್.ಸಿ.ಡಯಾಗ್ನಾಸ್ಟಿಕ್ಸ್ ರವರು ನೀಡಿದ್ದಾರೆ ಎಂಬ ಬಗ್ಗೆ ಸಹಿ ಇಲ್ಲ. ನಿಪಿ-16ನ್ನು ನಾನೇ ನ್ಯಾಯಾಲಯಕ್ಕೆ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

11. ಕಾರ್ಮಿಕ ಇಲಾಖೆಯಲ್ಲಿ ನನ್ನ ವ್ಯಾಜ್ಯವು ಇತ್ಯರ್ಥವಾಯಿತು. ಅಲ್ಲಿ ನಾನು ರೂ.19,452/- ಹಣವನ್ನು ಪಡೆದುಕೊಂಡಿದ್ದೇನೆ. ನಾನು ವಕೀಲರಾಗಿ ಎನ್ರೋಲ್ ಆಗಿರುವ ದಿನಾಂಕ ನೆನಪಿಲ್ಲ, ಸಂಖ್ಯೆ 260/2019.

12. ನಾನು ಎನ್.ಸಿ.ಡಯಾಗ್ನಾಸ್ಟಿಕ್ಸ್ ನಿಂದ ಕೆಲಸವನ್ನು ಜುಲೈ

2021ರಲ್ಲಿ ಬಿಟ್ಟಿದ್ದೇನೆ ಎಂದರೆ ಜೂನ್ 2021ರ ತಿಂಗಳ ಕೊನೆಯಲ್ಲೇ ಬಿಟ್ಟಿದ್ದೇನೆ, ಜುಲೈ 2021ರ ವೇತನವನ್ನು ನನಗೆ ಕೊಟ್ಟಿದ್ದಾರೆ. ನಾನು ರಿಜೈನ್ ಕೊಟ್ಟಿರುವುದಿಲ್ಲ. ನಾನು ಸ್ವತಃ ಕೆಲಸ ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ, ವೇತನವನ್ನು ಜಾಸ್ತಿ ಕೇಳಿದ್ದರಿಂದ, ಇನ್ಸೆಂಟಿವ್ ಬ್ಯಾಲೆನ್ಸ್ ಇದ್ದುದನ್ನು ಕೇಳಿದ್ದರಿಂದ ವೇತನ ಜಾಸ್ತಿ ಕೊಡಲು ಆಗುವುದಿಲ್ಲ, ರಿಜೈನ್ ಮಾಡಿ, ಈ ತಿಂಗಳ ಕೊನೆಗೆ ಕೆಲಸ ನಿಲ್ಲಿಸಿ, ಇನ್ಸೆಂಟಿವ್ ನ್ನು ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಿ ಎಂದು ತಿಳಿಸಿದ್ದರು. ಹಾಗೆ ಹೇಳಿದ ಜುಲೈ ತಿಂಗಳ ವೇತನವನ್ನು ನಾನು ಪಡೆದುಕೊಂಡೆ ಎಂದರೆ ನಿಜ. ನಾನು ಜೂನ್ ನಲ್ಲಿ ಕೆಲಸ ನಿಲ್ಲಿಸಿದಾಗ ಜುಲೈ ತಿಂಗಳು ಅಂದರೆ ನೋಟೀಸಿನ ಅವಧಿಯ ಸಂಬಳವನ್ನು ಪಡೆದುಕೊಂಡೆ ಎಂದರೆ ಸರಿಯಲ್ಲ, ನೋಟೀಸ್ ಪಿರಿಯಡ್ ಎಂದರೆ ನಾನು ಒಂದು ತಿಂಗಳು ಕೆಲಸ ಮಾಡಬೇಕಿತ್ತು, ಆದರೆ ಅವರು ಕೆಲಸ ಮಾಡುವಂತೆ ಹೇಳಿರಲಿಲ್ಲ, ಜುಲೈ ತಿಂಗಳ ಸ್ಯಾಲರಿ ಕೊಡುತ್ತೇನೆ ಎಂದು ಹೇಳಿದರು. ನಾನು ಆ ರೀತಿ ಜುಲೈ ತಿಂಗಳ ವೇತನವನ್ನು ಪಡೆದುಕೊಂಡ ನಂತರ ನನ್ನ ಮತ್ತು 2ನೇ ಪಕ್ಷಗಾರ ಎನ್.ಸಿ.ಡಯಾಗ್ನಾಸ್ಟಿಕ್ಸ್ ರವರ ಸಂಬಂಧವೆಲ್ಲವೂ ಕೊನೆಯಾಯಿತು ಎಂದರೆ ಸರಿಯಲ್ಲ. ಆ ರೀತಿ ವೇತನ ಕೊಡಲು ಬಾಕಿ ಇತ್ತು ಎಂಬುದನ್ನು ನಾನಾಗಲೀ ನನ್ನ ವಕೀಲರ ಮುಖಾಂತರವಾಗಲೀ 2ನೇ ಪಕ್ಷಗಾರರಿಗೆ ಆ ತಿಂಗಳಲ್ಲಿ ಅಥವಾ ನಂತರದ ತಿಂಗಳಲ್ಲಿ ತಿಳಿಸಿಲ್ಲ ಎಂದರೆ ಫೋನ್ ಮುಖಾಂತರ ಪದೇ ಪದೇ ತಿಳಿಸಿದ್ದೇನೆ. ಸದರಿ ವಿಚಾರವನ್ನು ನನ್ನ ಅರ್ಜಿಯಲ್ಲಿ ಹೇಳಿಲ್ಲ ಎನ್ನುವುದು ನಿಜ.

13. ಕೆಲಸ ಬಿಟ್ಟು 2 ವರ್ಷ 4 ತಿಂಗಳ ನಂತರ ಈ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. 2ನೇ ಪಕ್ಷಗಾರರ ಕೆಲಸಗಾರರು ಅಂದರೆ ನನ್ನ ಜೊತೆ ಕೆಲಸ ಮಾಡುತ್ತಿದ್ದವರು ನನ್ನ ಮೇಲೆ SC ST ಕಾಯಿದೆ ಕೆಳಗಡೆ ಮ್ಯಾನೇಜ್ಮೆಂಟ್ ಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನ ವಿಚಾರಣೆಗೆ ಕರೆದಾಗ

ಹಾಜರಾಗದೆ ನಾನು ಓಡಿಹೋದೆ ಎಂದರೆ ಸುಳ್ಳು.

(ಈ ಹಂತದಲ್ಲಿ 2ನೇ ಪಕ್ಷಗಾರರ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಗಿದೆ)

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**